**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ**

**ಓ.ಎಸ್. ಸಂಖ್ಯೆ 352/2024**

**ದಿನಾಂಕ 24.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಆರ್ ಎನ್ ಬಿ ವಕೀಲರಿಂದಃ**

ನಾನು ಸ.ನಂ. 123 ಆಸ್ತಿಯ ಕುರಿತು ಈ ದಾವೆಯನ್ನು ಹೂಡಿರುತ್ತೇನೆ. ಸದರಿ ಆಸ್ತಿಯು 4 ಎಕರೆ 15 ಗುಂಟೆ ಇರುತ್ತದೆ. ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ದಾವ ಆಸ್ತಿಯು ನನಗೆ ನನ್ನ ತಾಯಿಯ ಮೂಲಕ ದಾನಪತ್ರದಿಂದ ಬಂದಿರುತ್ತದೆ. ಸದರಿ ದಾನಪತ್ರವನ್ನು ದಿನಾಂಕಃ24.05.2020 ರಂದು ಬರೆದುಕೊಟ್ಟಿರುತ್ತಾರೆ. ಆ ಆಸ್ತಿಯು ನನ್ನ ತಾಯಿಗೆ ನನ್ನ ಮಾವಂದಿರಿಂದ ವಿಭಾಗಪತ್ರದ ಮೂಲಕ ಬಂದಿರುತ್ತದೆ. ನನ್ನ ತಾಯಿಗೆ ಸದರಿ ಆಸ್ತಿಯು ಮಲ್ಲಪ್ಪ, ಶ್ರೀರಾಮುಲು, ಆದಿಶೇಷ ನಾಯ್ಡು, ಗೋಪಾಲಪ್ಪ, ಸತ್ಯನಾರಾಯಣ ಮತ್ತು ಎಂ ಮಲ್ಲಪ್ಪ ಎಂಬುವರಿಂದ ಬಂದಿರುತ್ತದೆ. ಸದರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದು ಅದು ಬ್ಯಾಂಕ್?ನಲ್ಲಿ ಇದೆ ಎಂದು ಹೇಳಿದ್ದಾರೆ. ಸದರಿ ಪತ್ರ ನೋಂದಣಿ ಆಗಿದೆಯಾ ಎಂದರೆ ಗೊತ್ತಿಲ್ಲ. ನನ್ನ ಅಜ್ಜನಿಗೆ (ಅಮ್ಮನ ತಂದೆ) ನಾಲ್ಕು ಜನ ಅಣ್ಣಂದಿರು. ನನ್ನ ಮಾವಂದಿರಿಗೂ ನನ್ನ ತಾಯಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪ್ರತಿವಾದಿಯವರ ಮುತ್ತಾತಂದಿರಾದ ಪೆದ್ದರಾಮಣ್ಣ ಮತ್ತು ಪೆದ್ದಮಲ್ಲಪ್ಪ ಎಂಬುವರ ಮಕ್ಕಳಿಗೆ ಸೇರಿದ ಆಸ್ತಿ ಎಂದರೆ ಗೊತ್ತಿಲ್ಲ. ಪೆದ್ದರಾಮಣ್ಣನವರ ಮರಿಮೊಮ್ಮಕ್ಕಳಾದ ಪ್ರತಿವಾದಿಗಳಿಗೆ ದಾವಾ ಆಸ್ತಿಯಲ್ಲಿ ಅರ್ದ ಭಾಗ ಪಾಲು ಇದೆ ಎಂದರೆ ಗೊತ್ತಿಲ್ಲ ಮತ್ತು ಉಳಿದ ಅರ್ಧ ಭಾಗ ಪೆದ್ದಮಲ್ಲಪ್ಪ ಅವರ ಮೊಮ್ಮಕ್ಕಳಿಗೆ ಪಾಲು ಇದೆ ಎಂದರೆ ಗೊತ್ತಿಲ್ಲ. ಪೆದ್ದರಾಮಣ್ಣನವರು ಮಕ್ಕಳು ಮತ್ತು ಪೆದ್ದ ಮಲ್ಲಪ್ಪನವರ ಮಕ್ಕಳು ಒಟ್ಟಿಗೆ ಸೇರಿ ದಾವಾ ಆಸ್ತಿಯನ್ನು 1926 ರಲ್ಲಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ಸುಳ್ಳು ವಿಭಾಗ ಪತ್ರ ಸೃಷ್ಟಿಸಿ ದಾವಾ ಆಸ್ತಿ ನನ್ನದು ಎಂದು ಹೇಳಿ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಗೊತ್ತಿಲ್ಲ. ನನ್ನ ತಾಯಿಗೂ ಮತ್ತು ಪೆದ್ದ ರಾಮಣ್ಣ ಮತ್ತು ಪೆದ್ದ

ಮಲ್ಲಪ್ಪನವರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರವು ನೊಂದಾಯಿತವಲ್ಲದ ಕಾರಣ ನನ್ನ ತಾಯಿಗೆ ಯಾವುದೇ ಆಸ್ತಿಯೂ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯು ವಿಭಾಗ ಪತ್ರವನ್ನು ಸೃಷ್ಟಿಸಿ ದಾವಾ ಆಸ್ತಿಯನ್ನು ನನಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸೃಷ್ಟಿಸಿದ ದಾಖಲೆಗಳ ಪ್ರಕಾರ ನನ್ನ ತಾಯಿ ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ರೆವೀನ್ಯೂ ದಾಖಲಾತಿಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದರೆ ಸುಳ್ಳು. ಸದರಿ ಸಂಬಂಧಗಳನ್ನು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಿಯಾ ಎಂದರೆ ನನಗೆ ಗೊತ್ತಿಲ್ಲ. ಈ ದಿನದವರೆಗೂ ದಾವೆ ಆಸ್ತಿಯಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು ನನ್ನ ತಾಯಿಗೆ ದಾವಾ ಆಸ್ತಿಯು ಬಂದ ವಿಭಾಗ ಪತ್ರದ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ . ಹೇ. ಕೇ. ಸರಿ ಇದೆ.**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,**
**ಪಾವಗಡ**